ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

## DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK COMMITTEE

KNOWLEDGE IS POWER — DSS (S) UNITY IS STRENGTH — DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – 560 089.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834


1

ಗೆ,

ದಿನಾಂಕ : 04.08.2010

ಮಾನ್ಯ ಸಂಪಾದಕರು/ನಿರ್ದೇಶಕರು

__________________________

ಬೆಂಗಳೂರು

'ಪ್ರಕಟಣಾ ಕೃಪೆಗಾಗಿ'

ಮಾನ್ಯರೆ,

ವಿಷಯ : ಬಿಬಿಎಂಪಿ ವತಿಯಿಂದ ಮಾವಳಿಪುರ ವ್ಯಾಪ್ತಿಯಲ್ಲಿ ರಾಮ್ಕಿ ಸಂಸ್ಥೆಯು ನಡೆಸುತ್ತಿರುವ ತ್ಯಾಜ್ಯ ವಿಲೇವಾರಿ ಕಸ ಸಂಗ್ರಹಣಾ ಘಟಕದಿಂದ 12 ಗ್ರಾಮಗಳಿಗೂ ಹೆಚ್ಚು ಸುತ್ತಮುತ್ತಲಿನ ಪರಿಸರ ಮಲಿನವಾಗುತ್ತಿರುವುದನ್ನು ತಡೆಗಟ್ಟಿ, ಘಟಕವನ್ನು ಸ್ಥಗಿತಗೊಳಿಸಿ ಕೂಡಲೇ ಸ್ಥಳಾಂತರ ಮಾಡಬೇಕು ಹಾಗೂ ಕೆಲವು ಬೇಡಿಕೆಗಳನ್ನು ಪೂರೈಸಲು ಒತ್ತಾಯಿಸಿ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಯಲಹಂಕ ಹೋಬಳಿ ಸುಬೇದಾರ್ ಪಾಳ್ಯದ ಬೈಲಪ್ಪ ಹಾಗೂ ಮಕ್ಕಳು 2002 ಹಾಗೂ 2003ರಲ್ಲಿ ಬಿಎಂಪಿ ವತಿಯಿಂದ ತ್ಯಾಜ್ಯ ವಿಲೇವಾರಿ ಹಾಗೂ ಸಂಗ್ರಹಣೆ ಮಾಡಲು ಭೋಗಸ್ ದಾಖಲೆ, ಕರಾರು ಪತ್ರ ಮಾಡಿಸಿಕೊಂಡು, ಜಾರಕಬಂಡೆ ಕಾವಲ್ ಅರಣ್ಯ ಪ್ರದೇಶದ ಸರ್ವೆ.ನಂ. 59ರ ಜಮೀನು ಹಾಗೂ ಇತ್ಯಾದಿ ಜಮೀನುಗಳಲ್ಲಿ ಬಿಎಂಪಿ ಹಾಗೂ ನಗರ ಸಭೆಗಳಿಂದ ದಿನನಿತ್ಯ ನೂರಾರು ಟ್ರಕ್ ಲಾರಿಗಳಿಂದ ಘನ ತ್ಯಾಜ್ಯ ವಸ್ತುಗಳನ್ನು ಡಂಪ್ ಮಾಡಿಸಿಕೊಂಡು ಯಾವುದೇ ರೀತಿಯ ವೈಜ್ಞಾನಿಕ ಸಲಕರಣೆಗಳನ್ನು ಉಪಯೋಗಿಸದೆ, ತ್ಯಾಜ್ಯಕ್ಕೆ ಬೆಂಕಿ ಹಚ್ಚಿ ಹೊಗೆ ಬರುವಂತೆ ಮಾಡುತ್ತಿದ್ದರು. ವಿಷಪೂರಿತ ಕೈಗಾರಿಕೆ ಹಾಗೂ ಆಸ್ಪತ್ರೆಗಳ ತ್ಯಾಜ್ಯಗಳನ್ನೂ ಕೂಡ ತಂದು ಸುರಿಸಲಾಗುತ್ತಿತ್ತು. ಈ ತ್ಯಾಜ್ಯ ಕೊಳೆತು ದುರ್ವಾಸನೆ ಹಾಗೂ ಹೊಗೆಯಿಂದ ಎಲ್ಲ ಗ್ರಾಮಗಳ ಜನ–ಜಾನುವಾರುಗಳಿಗೆ ಹೆಚ್ಚಾಗಿ ವೃದ್ಧರು, ಮಕ್ಕಳಿಗೆ ಉಸಿರಾಡಲು ತುಂಬಾ ತೊಂದರೆಯಾಗಿತ್ತು. ರಾತ್ರಿಯ ಸಮಯದಲ್ಲಂತೂ ಕೆಟ್ಟ ವಾಸನೆಯ ಹೊಗೆ ತುಂಬಿ ತುಳುಕುತ್ತಿತ್ತು. ಈ ಸಮಸ್ಯೆಗಳ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ತಿಳಿಸಿದರೂ ಸಹ ವೈಜ್ಞಾನಿಕ ರೀತಿಯ ಕ್ರಮಗಳನ್ನು ಕೈಗೊಳ್ಳಲಿಲ್ಲ. ಇದರ ಬಗ್ಗೆ

ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK COMMITTEE

DSS (S) DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – ೫೬೦ ೦೮೯.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834



- ದಿನಾಂಕ 18-12-2003ರಂದು ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ, ಕಸ ಹಾಕುತ್ತಿರುವುದನ್ನು ಕೂಡಲೇ ನಿಲ್ಲಿಸುವ ಬಗ್ಗೆ ಗ್ರಾಮಸ್ಥರಿಂದ ಮನವಿ ಸಲ್ಲಿಸಲಾಗಿತ್ತು.

- ದಿನಾಂಕ 28-07-2005ರಂದು ಕಸ ಸಂಗ್ರಹಣಾ ಸ್ಥಳದಲ್ಲಿ ನೂರಾರು ಗ್ರಾಮಸ್ಥರುಗಳು, ರೈತರು, ಪ್ರತಿಭಟನೆ ಮಾಡುವ ಮೂಲಕ ಟ್ರಕ್, ಲಾರಿಗಳನ್ನು ನಿಲ್ಲಿಸಲಾಗಿತ್ತು. ಸ್ಥಳಕ್ಕೆ ಧಾವಿಸಿದ ಬೆಂ.ನ.ಜಿಲ್ಲೆ ಮಾನ್ಯ ಜಿಲ್ಲಾಧಿಕಾರಿಗಳಾದ ಎಂ.ಎ.ಸಾದಿಕ್‌ರವರು ಸ್ಥಳ ಪರಿಶೀಲನೆ ಮಾಡಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವುದನ್ನು ಒಂದು ವಾರದೊಳಗೆ ನಿಲ್ಲಿಸುವುದಾಗಿ ಆಶ್ವಾಸನೆ ನೀಡಿ ಹೋದರು.

- ದಿನಾಂಕ 11-08-2005ರಂದು ಬೈಲಪ್ಪನ ಮಕ್ಕಳು ಈ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ ಗ್ರಾಮದ ನಾಯಕರುಗಳ ಮೇಲೆ ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿ ಯಲಹಂಕ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲು ಮಾಡಿಸಿರುತ್ತಾರೆ.

- ದಿನಾಂಕ 24-08-2005ರಂದು ಮಾನ್ಯ ಸದಸ್ಯ ಕಾರ್ಯದರ್ಶಿ, ಕೆ.ಎಸ್.ಪಿ.ಸಿ.ಬಿ. ಇವರಿಗೆ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕಸ ಹಾಕುವುದನ್ನು ನಿಲ್ಲಿಸುವ ಬಗ್ಗೆ ಗ್ರಾಮಸ್ಥರಿಂದ ಮನವಿ ಸಲ್ಲಿಸಲಾಗಿತ್ತು.

- ದಿನಾಂಕ 22-10-2005ರಂದು ಬೈಲಪ್ಪನ ಮಕ್ಕಳು ಉದ್ದೇಶಪೂರ್ವಕವಾಗಿ ಲಿಚೆಟ್ ಡ್ಯಾಮ್‌ನಿಂದ ಲಕ್ಷಾಂತರ ಲೀಟರ್ ಲಿಚೆಟ್ ನೀರನ್ನು ಮಾವಳಿಪುರ, ಶಿವಕೋಟೆ ಕೆರೆಗಳಿಗೆ ಹರಿದು ಹೋಗುವಂತೆ ಮಾಡಿದ್ದರು. ಇದರಿಂದ ಕೆರೆಗಳ ನೀರು ಮಲಿನವಾಗಿ ಕೆಟ್ಟ ವಾಸನೆ ಬಂದು ಸೊಳ್ಳೆ, ನೊಣಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗಗಳು ಹರಡಿ ಗ್ರಾಮಗಳ ಜನ-ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗಿದ್ದವು. ಹಾಗೂ ಇದರಿಂದ ನೂರಾರು ಜಾನುವಾರುಗಳು ಸತ್ತಿರುತ್ತವೆ. ಇದರ ಬಗ್ಗೆ.

- ದಿನಾಂಕ 24-10-2005ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬೆಂ.ನ.ಜಿಲ್ಲೆ ಹಾಗೂ ಮಾನ್ಯ ಸದಸ್ಯ ಕಾರ್ಯದರ್ಶಿಗಳು ಕೆ.ಎಸ್.ಪಿ.ಸಿ.ಬಿ. ಬೆಂಗಳೂರು ಇವರಿಗೆ, ಗ್ರಾಮಸ್ಥರುಗಳಿಂದ ಮನವಿ ಸಲ್ಲಿಸಲಾಗಿತ್ತು.

ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

## DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK COMMITTEE

KNOWLEDGE IS POWER DSS (S) UNITY IS STRENGTH DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – ೫೬೦ ೦೮೯.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834




- ದಿನಾಂಕ 17–01–2006ರಂದು ಮಾನ್ಯ ಸದಸ್ಯ ಕಾರ್ಯದರ್ಶಿ ಕೆ.ಎಸ್.ಪಿ.ಸಿ.ಬಿ. ಇವರಿಗೆ ಹಾಗೂ ದಿನಾಂಕ 03–02–2006ರಂದು ಮಾನ್ಯ ತಹಶೀಲ್ದಾರ್ ಬೆಂ.ಉತ್ತರ(ಅಪರ)ತಾಲ್ಲೂಕು ಇವರಿಗೆ ಪರಿಸರ ಕೆಡುತ್ತಿರುವ ಬಗ್ಗೆ ತ್ಯಾಜ್ಯ ವಿಲೇವಾರಿ ನಿಲ್ಲಿಸಿ ಸೂಕ್ತ ಕ್ರಮಕ್ಕಾಗಿ ಗ್ರಾಮಸ್ಥರಿಂದ ಮನವಿ ಸಲ್ಲಿಸಲಾಗಿತ್ತು.

- ದಿನಾಂಕ 09–03–2006ರಂದು ಕೆ.ಎಸ್.ಪಿ.ಸಿ.ಬಿ.ಯ ಅಧಿಕಾರಿಗಳು ಬೈಲಪ್ಪ ಹಾಗೂ ಮಕ್ಕಳ ಮೇಲೆ (22–10–2005ರಂದು ಪರಿಸರ ಮಲಿನ ಮಾಡಿರುವ ಬಗ್ಗೆ) ಕ್ರಿಮಿನಲ್ ಮೊಕದ್ದಮೆ ಹೂಡಿರುತ್ತಾರೆ.

- ದಿನಾಂಕ 15–08–2006ರಂದು ಬೈಲಪ್ಪನ ಮಕ್ಕಳು ಹಾಗೂ ಕೆಲವು ಗೂಂಡಾಗಳಿಂದ ಡಿಎಸ್‌ಎಸ್ ತಾಲ್ಲೂಕು ಸಂಯೋಜಕ ಬಿ.ಶ್ರೀನಿವಾಸನ ಮೇಲೆ ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿ, ಜಾತಿ ನಿಂದನೆ ಮಾಡಿ ನಂತರ ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂಬುದಾಗಿ ಹನುಮಂತರಾಯಪ್ಪ ಯಲಹಂಕ ಪೊಲೀಸ್ ಠಾಣೆಗೆ ದೂರು ನೀಡಿ ಶ್ರೀನಿವಾಸ್ ಹಾಗೂ ಸ್ನೇಹಿತರ ಮೇಲೆ ಕೇಸು ದಾಖಲು ಮಾಡಿಸಿರುತ್ತಾರೆ.

- ದಿನಾಂಕ 14–06–2007ರಂದು ಮಾನ್ಯ ಲೋಕಾಯುಕ್ತರು, ಬೆಂಗಳೂರು ಇವರಿಗೆ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಹಾಗೂ ತ್ಯಾಜ್ಯ ವಸ್ತುಗಳ ವಿಲೇವಾರಿ ಹಾಗೂ ರಾಮ್ಕಿ ಸಂಸ್ಥೆಯ ಕಸ ಸಂಗ್ರಹಣಾ ಘಟಕದ ವ್ಯವಸ್ಥೆಯನ್ನು ನಿಲ್ಲಿಸುವ ಬಗ್ಗೆ ಗ್ರಾಮಸ್ಥರುಗಳಿಂದ ಮನವಿ ಸಲ್ಲಿಸಲಾಗಿತ್ತು.

- ದಿನಾಂಕ 26–08–2003ರಂದು ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಬೆಂ.ನ.ಜಿಲ್ಲೆ ಇವರಿಗೆ ಮಾವಳ್ಳಿಪುರ ಸರ್ವೆ ನಂ.8ರಲ್ಲಿ 100 ಎಕರೆ ಜಮೀನನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಕಸ ಸಂಗ್ರಹಣೆಗಾಗಿ ಮಂಜೂರು ಮಾಡಿರುವ ಆದೇಶವನ್ನು ರದ್ದುಗೊಳಿಸುವಂತೆ ಹಾಗೂ ಈ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುವ ಬಡವರಿಗೆ ಸಾಗುವಳಿ ಚೀಟಿ ನೀಡುವಂತೆ ದಲಿತ ಸಂಘರ್ಷ ಸಮಿತಿ (ಸಂಯೋಜಕ)ಯು ಮನವಿ ಸಲ್ಲಿಸಲಾಗಿತ್ತು. (ಮಾನ್ಯ ಜಿಲ್ಲಾಧಿಕಾರಿಗಳು ಹಿಂಬರಹ ನೀಡಿರುತ್ತಾರೆ)

- ದಿನಾಂಕ 24–04–2004ರಂದು ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು ಮಾವಳಿಪುರ ಸರ್ವೆನಂ.8ರ 100 ಎಕರೆ ಜಮೀನನ್ನು ಕಸ ತುಂಬುವ ಸಲುವಾಗಿ ಬಿಬಿಎಂಪಿಗೆ ಗುತ್ತಿಗೆಯ ಆಧಾರದ ಮೇಲೆ ನೀಡಿರುತ್ತಾರೆ. ಆದರಂತೆ ಕಸ ಸಂಗ್ರಹಣಾ ಘಟಕ ನಿರ್ಮಿಸಿರುತ್ತಾರೆ. ಎಂ.ಎಸ್.ಡಬ್ಲ್ಯೂ.(ಮ್ಯಾನೇಜ್‌ಮೆಂಟ್ ಅಂಡ್ ಹ್ಯಾಂಡಲಿಂಗ್) ರೂಲ್ಸ್ 2000ರ ಅನ್ವಯ ಎಲ್ಲ ಷರತ್ತುಗಳ ಆಧಾರದ ಮೇಲೆ ತ್ಯಾಜ್ಯ ವಸ್ತುಗಳ ಸಂಗ್ರಹಣೆ

ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

## DALITHA SANGARSHA SAMMITTEE

ಸಂಯೋಜಕ **Co-Ordinator**

**ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ**

**BANGALORE NORTH TALUK COMMITTEE**

DSS (S) DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – ೫೬೦ ೦೮೯.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834



ಹಾಗೂ ಶೇಖರಣೆ ಮಾಡುವ ಜವಾಬ್ದಾರಿಯನ್ನು ರಾಮ್ಕಿ ಸಂಸ್ಥೆಗೆ ಬಿಬಿಎಂಪಿ ನೀಡಿರುತ್ತದೆ. ಆದರೆ ರಾಮ್ಕಿ ಸಂಸ್ಥೆಯು ಕಸ ಸಂಗ್ರಹಣೆ ಮತ್ತು ಶೇಖರಣೆಯ ಬಗ್ಗೆ ಯಾವುದೇ ರೀತಿಯ ವೈಜ್ಞಾನಿಕ ಕ್ರಮಗಳನ್ನು ನಿರ್ವಹಿಸುತ್ತಿಲ್ಲ. ಘನತ್ಯಾಜ್ಯದಿಂದ ಕೊಳೆತು ಬರುವ ವಿಷಪೂರಿತ ಲಿಚೆಟ್ ನೀರನ್ನು ಲಿಚೆಟ್ ಟ್ಯಾಂಕಿನಿಂದ ಲಕ್ಷಾಂತರ ಲೀಟರ್ ನೀರನ್ನು ಕೆರೆಗಳಿಗೆ ಹರಿದು ಹೋಗುವಂತೆ ಮಾಡಿದ್ದರು. ಇದರಿಂದ ಕೆರೆಯ ನೀರು ಮಲಿನವಾಗಿದ್ದು, ಇದರ ವಾಸನೆಯಿಂದ ಸೊಳ್ಳೆ, ನೊಣ,ಕ್ರಿಮಿಕೀಟಗಳು ಹೆಚ್ಚಿದ್ದು ಸಾಂಕ್ರಾಮಿಕ ರೋಗಗಳು ಹರಡಿ ಹಾಗೂ ಲಿಚೆಟ್ ನೀರು ಭೂಮಿಯಲ್ಲಿ ಹಿಂಗುವುದರಿಂದ ಅಂತರ್‌ಜಲದ ಕುಡಿಯುವ ನೀರು ಕೂಡ ಮಲಿನವಾಗಿರುತ್ತದೆ. ದಿನೇ ದಿನೇ ಇದೇ ರೀತಿ ನಿರಂತರವಾಗಿ ಪರಿಸರ ಮಾಲಿನ್ಯದಿಂದ ಪರಿಸರ ಜೀವಿಗಳಿಗೆ ಒಳ್ಳೆಯ ಗಾಳಿ, ಒಳ್ಳೆಯ ನೀರು ಸಿಗದೆ ಜನ-ಜಾನುವಾರುಗಳು ಗ್ರಾಮಗಳನ್ನು ಬಿಟ್ಟು ವಲಸೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ರಾಮ್ಕಿ ಸಂಸ್ಥೆಯ ಕಸ ಸಂಗ್ರಹಣಾ ಘಟಕವನ್ನು ಕೂಡಲೇ ಸ್ಥಗಿತಗೊಳಿಸಬೇಕೆಂದು ಹಾಗೂ ಕೆರೆಗಳಲ್ಲಿ ನಿಂತಿರುವ ಲಿಚೆಟ್ ನೀರಿಗೆ ಹಾಗೂ ಎಲ್ಲ ಗ್ರಾಮಗಳಲ್ಲಿಯೂ ಔಷಧಿ ಸಿಂಪಡಿಸಬೇಕು ಹಾಗೂ ರಾಮ್ಕಿ ಸಂಸ್ಥೆಯ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ದ.ಸಂ.ಸ. ಸಮಿತಿಯು ದಿನಾಂಕ 06-10-2009ರಂದು ಘಟಕದ ಮುಂದೆ ಧರಣಿ ನಡೆಸಲಾಗಿತ್ತು. ಸ್ಥಳಕ್ಕೆ ಧಾವಿಸಿದ ಬಿಬಿಎಂಪಿಯ ಮಾನ್ಯ ಆರೋಗ್ಯ ಆಯುಕ್ತರು ಈ ಸಮಸ್ಯೆಗಳ ಬಗ್ಗೆ ದಿನಾಂಕ 07-10-2009ರಂದು ಸಭೆ ಕರೆದು ತೀರ್ಮಾನಿಸಲಾಗುವುದು ಸಭೆಗೆ ಬನ್ನಿ ಎಂದು ಆಹ್ವಾನಿಸಿದರು. ಅದರಂತೆ ನಾವುಗಳು ದಿನಾಂಕ 07-10-2009ರಂದು ರಾಮ್ಕಿ ಸಂಸ್ಥೆಯ ಘಟಕಕ್ಕೆ ಹೋಗುವ ದಾರಿಯಲ್ಲಿ ಯಲಹಂಕ ವಲಯದ ಜಂಟಿ ಆಯುಕ್ತರಾದ ವಿರೂಪಾಕ್ಷ ಮೈಸೂರ ಹಾಗೂ ಕಾರ್ಯಪಾಲಕ ಅಭಿಯಂತರರಾದ ಎ.ಜಿ.ರಂಗಯ್ಯ ಇತರರು ಗುಂಪು ಕಟ್ಟಿಕೊಂಡು ಬಂದು ಏಕಾಏಕಿ ಗ್ರಾಮದ ಮುಖಂಡರ ಮೇಲೆ ಎರಗಿ ಅವಾಚ್ಯವಾಗಿ ನಿಂದಿಸುತ್ತಾ ಜಗಳ ಮಾಡಿ ಹೊಡೆದು, ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸ್ ಅಧಿಕಾರಿಗಳು ಬಿಬಿಎಂಪಿ ಮಾನ್ಯ ವಿಶೇಷ ಆಯುಕ್ತರು ಹಾಗೂ ಬಿಬಿಎಂಪಿ ಟಾಸ್ಕ್ ಫೋರ್ಸ್, ಐಜಿಪಿ ನಾರಾಯಣ ನಡುಮನಿಯವರು ಸ್ಥಳಕ್ಕೆ ಬಂದರು. ಪದಾಧಿಕಾರಿಗಳಾದ ನಾವುಗಳು ಇಲ್ಲಿನ ಸಮಸ್ಯೆಗಳನ್ನು ತಿಳಿಸುತ್ತಾ, ಇಲ್ಲಿನ ಘಟಕವನ್ನು ಸ್ಥಗಿತಗೊಳಿಸುವಂತೆ ಮನವಿ ಸಲ್ಲಿಸಲಾಗಿತ್ತು. ಈ ಬಗ್ಗೆ ಮಾನ್ಯ ಆಯುಕ್ತರೊಂದಿಗೆ ಸಭೆ ಕರೆದು ಚರ್ಚಿಸಿ ತೀರ್ಮಾನಿಸಲಾಗುವುದು, ದಿನಾಂಕ 09-10-2009ರಂದು ಬೆಂಗಳೂರು ಬಿಬಿಎಂಪಿ ಕೇಂದ್ರ ಕಛೇರಿಗೆ ಬನ್ನಿ ಎಂದು ದಿನಾಂಕ ನಿಗದಿ ಪಡಿಸಿದರು. ನಂತರ ನಾವುಗಳೆಲ್ಲರೂ ಮನೆಗೆ ವಾಪಾಸು ಹೋದೆವು. ನಂತರ ಜಂಟಿ ಆಯುಕ್ತರಾದ ವಿರೂಪಾಕ್ಷ ಮೈಸೂರ ಹಾಗೂ ಎ.ಜಿ.ರಂಗಯ್ಯ ಇವರುಗಳು ನಮ್ಮ ಶಾಂತಿಯುತ ಹೋರಾಟವನ್ನು ಮೊಟಕುಗೊಳಿಸಲು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಪೊಲೀಸ್ ಠಾಣೆಗೆ

4

ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

**DALITHA SANGARSHA SAMMITTEE**

KNOWLEDGE IS POWER — UNITY IS STRENGTH

**ಸಂಯೋಜಕ Co-Ordinator**

**ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ**

**BANGALORE NORTH TALUK COMMITTEE**

DSS (S) DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – ೫೬೦ ೦೮೯.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834



ಸುಳ್ಳು ಕಂಪ್ಲೆಂಟ್ ಮಾಡಿದ್ದರಿಂದ ಪೋಲೀಸ್ ಅಧಿಕಾರಿಗಳು ದ.ಸಂ.ಸಮಿತಿಯ ಶ್ರೀನಿವಾಸ್‌ರವರನ್ನು ರಾತ್ರೋರಾತ್ರಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನಾವುಗಳು ಜಾಮೀನಿನ ಮೇಲೆ ಹೊರಬಂದಿರುತ್ತೇವೆ.

ದಿನಾಂಕ 09–10–2009ರಂದು ಬಿಬಿಎಂಪಿ ಕೇಂದ್ರ ಸಭೆಗೆ ಹಾಜರಾಗಿ ಎಲ್ಲ ಸಮಸ್ಯೆಗಳ ಬಗ್ಗೆ ಮಾನ್ಯ ಆಯುಕ್ತರಾದ ಭರತ್‌ಲಾಲ್ ಮೀನಾರವರಿಗೆ ತಿಳಿಸಿದಾಗ ಮಾನ್ಯ ಆಯುಕ್ತರು ಪರಿಸರ ಮಲಿನಗೊಳಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಹಾಗೂ ಎಲ್ಲ ಗ್ರಾಮಗಳಲ್ಲಿ ವೈದ್ಯಕೀಯ ತಪಾಸಣೆ, ಜಾನುವಾರುಗಳ ತಪಾಸಣೆ ಹಾಗೂ ಪರಿಸರ ತಪಾಸಣೆ ಹಾಗೂ ವೈಜ್ಞಾನಿಕ ಸಲಕರಣೆಗಳನ್ನು ಮಾಡುತ್ತೇವೆ ಮತ್ತು ಸುಳ್ಳು ಕೇಸು ದಾಖಲು ಮಾಡಿರುವುದನ್ನು ವಾಪಾಸು ತೆಗೆಸುತ್ತೇನೆ ಎಂದು ತಿಳಿಸಿದರು. ನಾವುಗಳು ಘಟಕವನ್ನು ಸ್ಥಗಿತಗೊಳಿಸಿ ಎಂದು ಮಾಡಿದ ಮನವಿಯ ಬಗ್ಗೆ ವಿಮಾನ ನಿಲ್ದಾಣಗಳು ಈ ಘಟಕಕ್ಕೆ ತುಂಬಾ ಹತ್ತಿರವಿದ್ದು, ತೊಂದರೆಯಾಗುವ ಬಗ್ಗೆ ಡಿಫೆನ್ಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಘಟಕವನ್ನು ಸ್ಥಳಾಂತರಿಸುತ್ತೇವೆ ಎಂದು ಆಶ್ವಾಸನೆ ನೀಡಿದರು.

ದಿನಾಂಕ 22–07–2010ರಂದು ಡೆಂಘೀ ಜ್ವರದಿಂದ ಒಬ್ಬ ಬಾಲಕ, ದಿನಾಂಕ 19–07–2010ರಂದು ಒಬ್ಬ ರೈತ ಮೃತಪಟ್ಟಿರುತ್ತಾರೆ. ಹಾಗೂ ಈ ವ್ಯಾಪ್ತಿಯಲ್ಲಿ ಹುಚ್ಚುನಾಯಿಗಳ ಹಾವಳಿ ಹೆಚ್ಚಾಗಿ ಒಬ್ಬ ಬಾಲಕಿಗೆ ಕಚ್ಚಿರುತ್ತದೆ. ಇದಲ್ಲದೆ ಕಿಡ್ನಿ ಖಾಯಿಲೆ, ಮಲೇರಿಯಾ ಇತ್ಯಾದಿ ಭಯಾನಕ ಖಾಯಿಲೆಗಳಿಂದ 9ವರ್ಷಗಳಿಂದಲೂ ಸತತವಾಗಿ ಈ ಎಲ್ಲ ಮಾರಣಾಂತಿಕ ಸಮಸ್ಯೆಗಳನ್ನು ಒಂದಲ್ಲಾ ಒಂದು ರೀತಿಯಲ್ಲಿ ಎದುರಿಸುತ್ತಾ ಎಲ್ಲ ಗ್ರಾಮಗಳು ತತ್ತರಿಸಿ ಹೋಗಿರುತ್ತವೆ.

ದಿನಾಂಕ 22–07–2010ರಂದು ಡೆಂಘೀ ಜ್ವರದಿಂದ ವಿದ್ಯಾರ್ಥಿ ಅಕ್ಷಯ್‌ಕುಮಾರ್ ಮೃತಪಟ್ಟಿದ್ದರಿಂದ ದ.ಸಂ.ಸ. ಕಾರ್ಯಕರ್ತರು, ನೂರಾರು ರೈತ ಗ್ರಾಮಸ್ಥರು ರಾಮ್ಕಿ ಸಂಸ್ಥೆಯ ಘಟಕದ ಮುಖ್ಯ ರಸ್ತೆಯಲ್ಲಿಟ್ಟು ಶವವಿಟ್ಟು ಪ್ರತಿಭಟನೆ ಮಾಡಲಾಗಿತ್ತು, ಪ್ರತಿಭಟನೆಯ ಸ್ಥಳಕ್ಕೆ ಬಿಬಿಎಂಪಿ ಅಧಿಕಾರಿಗಳು ಬಂದು ಮಾನ್ಯ ಆಯುಕ್ತರು, ಮಾನ್ಯ ಮಹಾಪೌರರೊಂದಿಗೆ ಸಭೆ ಕರೆದು ಇಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ತಿಳಿಸಿದ್ದರು. ಅದರಂತೆ

ದಿನಾಂಕ 23–07–2010ರಂದು ಬಿಬಿಎಂಪಿ ಕೇಂದ್ರದ ಮಾನ್ಯ ಮಹಾಪೌರರ ಕಛೇರಿಯಲ್ಲಿ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಮಾನ್ಯ ಮಹಾಪೌರರಾದ ಎಸ್.ಕೆ.ನಟರಾಜ್‌ರವರು, ಮಾನ್ಯ ಆಯುಕ್ತರಾದ ಸಿದ್ಧಯ್ಯನವರು ಹಾಗೂ ಡಿಎಸ್‌ಎಸ್ ರಾಜ್ಯ ಸಂಸ್ಥಾಪಕರಾದ ವಿ.ನಾಗರಾಜುರವರು, ಇ.ಎಸ್.ಜಿ.

ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

## DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK COMMITTEE

DSS (S) DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – ೫೬೦ ೦೮೯.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834



ಪರಿಸರವಾದಿಗಳಾದ ಲಿಯೋ ಸಲಡಾನ, ಗ್ರಾಮ ಪಂಚಾಯ್ತಿ ಸದಸ್ಯರು, ಡಿಎಸ್‌ಎಸ್ ಜಿಲ್ಲಾ ಹಾಗೂ ತಾಲ್ಲೂಕು ಪದಾಧಿಕಾರಿಗಳು ಭಾಗವಹಿಸಿದ್ದರು. ಸಭೆಯಲ್ಲಿ 2002–2003ರಿಂದ ಇವತ್ತಿನವರೆಗೂ ಕಸ ಸಂಗ್ರಹಣ ಘಟಕದಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ತಿಳಿಸುತ್ತಾ, ಕಸ ಸಂಗ್ರಹಣಾ ಘಟಕ ಸ್ಥಗಿತಗೊಳಿಸಿ

ಸ್ಥಳಾಂತರ ಮಾಡುವಂತೆ ಹಾಗೂ ಕೆಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗಿತ್ತು. ಮಾನ್ಯ ಮಹಾಪೌರರು ಹಾಗೂ ಮಾನ್ಯ ಆಯುಕ್ತರು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ, ಘಟಕ ಸ್ಥಗಿತಗೊಳಿಸಿ,

ಸ್ಥಳಾಂತರ ಮಾಡುವ ಬಗ್ಗೆ ಹಾಗೂ ನಿಮ್ಮ ಬೇಡಿಕೆಗಳನ್ನು ಈಡೇರಿಸುತ್ತೇವೆಂದು ಆಶ್ವಾಸನೆ ನೀಡಿದರು. ಇದರುವರೆಗೂ ಬಂದು ಹೋಗಿರುವ ಎಲ್ಲ ಆಯುಕ್ತರ ಆಶ್ವಾಸನೆಗಳು ಹುಸಿಯಾಗುತ್ತಲೇ ಇವೆ.

ಬೆಂಗಳೂರು ನಗರ ಹೈಟೆಕ್ ನಗರ ಎಂದು ಹೆಸರುವಾಸಿಯಾಗಿದ್ದು ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಕೋಟ್ಯಾಂತರ ರೂಗಳನ್ನು ಖರ್ಚು ಮಾಡಿದ್ದರೂ ಕೂಡ ಪರಿಸರ ಮಾಲಿನ್ಯ ನಿಯಂತ್ರಿಸಲು ಬಿಬಿಎಂಪಿ ವಿಫಲವಾಗಿದೆ. ಈ ಘಟಕದಿಂದ ವಿಮಾನ ನಿಲ್ದಾಣಗಳು ಸುಮಾರು 6ರಿಂದ 7 ಕಿ.ಮೀ. ಅಂತರದಲ್ಲಿರುತ್ತದೆ. ಈ ಘಟಕ ಬೆಂಗಳೂರಿನಿಂದ ಸುಮಾರು 14.5 ಕಿ.ಮೀ.ಹತ್ತಿರವಿದೆ. ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ಹರಿದು ಹೋಗುವ ಪ್ರದೇಶ ಸಹ ಇರಲಿದೆ. ಈ ಘಟಕದಿಂದ ಗ್ರಾಮಗಳೂ ಕೂಡ ತುಂಬಾ ಹತ್ತಿರವಿರುತ್ತವೆ. ಈ ವ್ಯಾಪ್ತಿಯಲ್ಲಿ ಹೆಚ್ಚು ದಲಿತ ಕುಟುಂಬಗಳಿದ್ದು ಪರ್ಯಾಯ ವ್ಯವಸ್ಥೆ ಕಾಣದೆ ಸಾವು–ನೋವಿನಿಂದ ಭಯದ ವಾತಾವರಣದಲ್ಲಿ ಜೀವನ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಘೋರ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ಬಂದಿದ್ದರೂ ಕೂಡ ಯಾವುದೇ ರೀತಿಯ ಜನಪರ ಅಭಿವೃದ್ಧಿ, ಪರಿಸರ ಅಭಿವೃದ್ಧಿ ಕೆಲಸಗಳನ್ನು ಮಾಡಲು ನಿಸ್ಸಹಾಯಕರಾಗಿದ್ದಾರೆ. ಈ ಘಟಕ ವ್ಯಾಪ್ತಿಯ ಪರಿಸರಕ್ಕೆ ಆಗುವ ತೊಂದರೆಗಳನ್ನು ತಪ್ಪಿಸದೆ ಎಸಿ ಬಂಗಲೆಗಳ ಸ್ವಾರ್ಥದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದಾರೆ.

ಇಂತಹ ಅಸಮಾನತೆ, ಭ್ರಷ್ಟಾಚಾರ, ಪರಿಸರ ವಿರೋಧಿಗಳ ವಿರುದ್ಧ ಸಿಡಿದೆದ್ದು ಪರಿಸರ ಮಾಲಿನ್ಯವನ್ನು ನಿಯಂತ್ರಿಸಿ ಪರಿಸರ ಜೀವಿಗಳನ್ನು ರಕ್ಷಿಸಿ ಪರಿಸರ ವಾದಿಗಳಾದ ನಾವೆಲ್ಲರೂ ಸಹ ಮಾನವೀಯ ಮೌಲ್ಯಗಳನ್ನು ಅರಿತು ಕಾನೂನು ಬಾಹಿರವಾಗಿ ರಾಮ್ಕಿ ಸಂಸ್ಥೆ ನಡೆಸುತ್ತಿರುವ ಕಸ ಸಂಗ್ರಹಣಾ ಘಟಕದಿಂದ ಆಗುವ ತೊಂದರೆಗಳನ್ನು ತಪ್ಪಿಸಲು ಹೋರಾಟ ಮಾಡಬೇಕಾಗಿದೆ.

ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

## DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK COMMITTEE

KNOWLEDGE IS POWER — DSS (S) | UNITY IS STRENGTH — DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – 560 089.

Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834



ಒತ್ತಾಯಗಳು :

1. ಈ ಘಟಕದಲ್ಲಿ ಈಗಾಗಲೇ ಕಸ ಹಾಕುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು.
2. ಈ ಕಸ 'ಸಂಗ್ರಹಣಾ ಘಟಕವನ್ನು ಸ್ಥಗಿತಗೊಳಿಸಿ ಸ್ಥಳಾಂತರ ಮಾಡಬೇಕು.
3. ಕುಡಿಯುವ ನೀರಿಗೆ ತೊಂದರೆಯಾಗಿರುವ ಗ್ರಾಮಗಳಿಗೆ ಕಾವೇರಿ ನೀರು ಒದಗಿಸಬೇಕು.
4. ಎಲ್ಲಾ ಗ್ರಾಮಗಳ ಕುಟುಂಬಗಳಿಗೆ ವಿವಿಧ ಆಸ್ಪತ್ರೆಗಳಿಂದ ಅನುಭವವಿರುವ ಸಂಬಂಧಪಟ್ಟ ವೈದ್ಯರುಗಳಿಂದ ವೈದ್ಯಕೀಯ ತಪಾಸಣೆ ಮಾಡಬೇಕು. ನೊಂದ ಕುಟುಂಬಗಳಿಗೆ ಚಿಕಿತ್ಸೆ, ಪರಿಹಾರ ನೀಡಬೇಕು.
5. ಘಟಕದಲ್ಲಿ ಹಾಗೂ ಬೈಲಪ್ಪನವರು ಅಕ್ರಮವಾಗಿ ಹಾಕಿಕೊಂಡಿರುವ ವಿಷಪೂರಿತ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಬೇರೆಡೆಗೆ ಸಾಗಿಸಿ ಈ ಪ್ರದೇಶವನ್ನು ಪರಿಸರ ಮಾಲಿನ್ಯ ರಹಿತ ಪ್ರದೇಶವನ್ನಾಗಿ (ಡಿ ಕಂಟಾಮಿನೇಟ್) ಮಾರ್ಪಡಿಸಬೇಕು.
6. ಅಂತರ್ಜಲದ ನೀರನ್ನು ಪರೀಕ್ಷಿಸಿ ಮಲಿನವಾಗದಂತೆ ತಡೆಗಟ್ಟಬೇಕು.
7. ಸೊಳ್ಳೆ, ನೊಣ ಕ್ರಿಮಿಕೀಟಗಳ ನಿಯಂತ್ರಣಕ್ಕೆ ಫಾಗಿಂಗ್/ಔಷಧಿ ಸಿಂಪಡಿಸಬೇಕು.
8. ಡೆಂಘಿ ಜ್ವರದಿಂದ ಮೃತಪಟ್ಟ ವಿದ್ಯಾರ್ಥಿ ಅಕ್ಷಯ್‌ಕುಮಾರ್‌ನ ಕುಟುಂಬಕ್ಕೆ, ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟ ರೈತ ರಾಜಣ್ಣನ ಕುಟುಂಬಕ್ಕೆ, ಕಿಡ್ನಿ ಕಾಯಿಲೆಯಿಂದ ಸಾವು ನೋವಿನಿಂದ ಬಳಲುತ್ತಿರುವ ಮುನಿರಾಜುವಿನ ಕುಟುಂಬಕ್ಕೆ ತಲಾ ರೂ. 5,00,000/–(ಐದು ಲಕ್ಷ)ರೂಪಾಯಿಗಳ ಪರಿಹಾರ ನೀಡಬೇಕು ಹಾಗೂ ಹುಚ್ಚುನಾಯಿ ಕಚ್ಚಿರುವ ಚಿತ್ರಾ ಎಂಬ ಬಾಲಕಿಯ ಕುಟುಂಬಕ್ಕೆ ಮತ್ತು ಭಯಾನಕ ಕಾಯಿಲೆಯಿಂದ ಬಳಲುತ್ತಿರುವ ಕುಟುಂಬಗಳಿಗೆ ಪರಿಹಾರ ನೀಡಬೇಕು.
9. ಮಾವಳಿಪುರದಲ್ಲಿ ಸಾರ್ವಜನಿಕ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕು.
10. ದಲಿತ ನಾಯಕರ ಮೇಲೆ ಸುಳ್ಳು ಕೇಸು ದಾಖಲಿಸಿರುವುದನ್ನು ವಾಪಸ್ಸು ಪಡೆಯಬೇಕು.

ಶಿಕ್ಷಣ ಸಂಘಟನೆ ಹೋರಾಟ

# ದಲಿತ ಸಂಘರ್ಷ ಸಮಿತಿ

## DALITHA SANGARSHA SAMMITTEE

ಸಂಯೋಜಕ Co-Ordinator

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ

BANGALORE NORTH TALUK COMMITTEE

KNOWLEDGE IS POWER — DSS (S) — UNITY IS STRENGTH — DSS (S)

ವಿಳಾಸ : ಮಾವಳಿಪುರ, ಶಿವಕೋಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು – 560 089.
Address : Mavalipura, Shivakote Post, Hesaraghatta Hobli, Bangalore North Taluk, Bangalore - 560 089. Mob : 9448174834

11. ಕಾನೂನು ಬಾಹಿರವಾಗಿ ಕಸ ಸಂಗ್ರಹಣೆ ಹಾಗೂ ಶೇಖರಣೆ ಮಾಡಿ ಪರಿಸರ ಮಲಿನ ಮಾಡಿರುವ ರಾಮ್ಕಿ ಸಂಸ್ಥೆಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು.
12. ಜಂಟಿ ಆಯುಕ್ತರಾದ ವಿರೂಪಾಕ್ಷ ಮೈಸೂರ ಹಾಗೂ ಅಭಿಯಂತರ ಎ.ಜಿ.ರಂಗಯ್ಯ ಎಂಬುವರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕು.
13. ಕೆ.ಎಸ್.ಪಿ.ಸಿ.ಬಿ.ಯು ಬೈಲಪ್ಪನವರ ಮೇಲೆ ಹಾಕಿರುವ ಕ್ರಿಮಿನಲ್ ಮೊಕದ್ದಮೆ ಮುಂದುವರೆಸಬೇಕು.

ಈ ಮೇಲ್ಕಂಡ ಬೇಡಿಕೆಗಳನ್ನು ಕೂಡಲೇ ಈಡೇರಿಸದಿದ್ದಲ್ಲಿ ಬಿಬಿಎಂಪಿ ಹಾಗೂ ಸರ್ಕಾರದ ವಿರುದ್ಧ ಪರಿಸರ ಉಳಿವಿಗಾಗಿ ರಾಜ್ಯ ಮಟ್ಟದಲ್ಲಿ ಹಂತ ಹಂತವಾಗಿ ತೀವ್ರ ಸ್ವರೂಪದ ಉಗ್ರವಾದ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಈ ಮೂಲಕ ಸಮಿತಿಯು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಮನವಿಮಾಡಿಕೊಳ್ಳುತ್ತದೆ.

ವಂದನೆಗಳೊಂದಿಗೆ,

ಇಂತಿ

(ಸಹಿ)

ಬಿ.ಶ್ರೀನಿವಾಸ್